

بسم اللهِ الرّحمٰنِ الرّحيم

# ಬಿದ್‌ಅತ್ (ನವೀನ ಆಚರಣೆ)ಗಳಿಂದ ದೂರವಿರಿ; ಅಲ್ಲಾಹನ ಆಜ್ಞೆಗಳನ್ನು ನಿಖರವಾಗಿ ಪಾಲಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **18–03–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ತಂದೆ ತಾಯಂದಿರು ಕೆಲವು ಸಾರಿ ತಮ್ಮ ಮಕ್ಕಳು ಮಾಡಿದ ಕೆಲಸವನ್ನು ಕಂಡು ಕಠಿಣವಾಗಿ ವರ್ತಿಸುತ್ತಾರೆ ಮತ್ತು ಅತ್ಯಂತ ಹೆಚ್ಚು ಕಠಿಣವಾಗಿ ಅತೃಪ್ತಿ ಸೂಚಿಸುತ್ತಾರೆ. ಇನ್ನು ಕೆಲವು ತಂದೆ ತಾಯಂದಿರು ತಮ್ಮ ಮಕ್ಕಳು ಮಾಡುವ ಕೆಲಸಗಳನ್ನು ಲಕ್ಷಿಸುವುದೇ ಇಲ್ಲ. ಆ ಕಾರಣದಿಂದ ಅವರ ಮಕ್ಕಳಿಗೆ ಒಳ್ಳೆಯ ಕೆಲಸ ಮತ್ತು ಕೆಟ್ಟ ಕೆಲಸದ ವ್ಯತ್ಯಾಸವೇ ತಿಳಿದಿರುವುದಿಲ್ಲ. ಈ ಎರಡು ವಿಷಯಗಳೂ ಮಕ್ಕಳ ತರಬೇತಿಯ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಮಕ್ಕಳೊಂದಿಗೆ ಕಠಿಣವಾಗಿ ವರ್ತಿಸುತ್ತಾ ಅನಗತ್ಯವಾಗಿ ಯಾವುದೇ ಆವಶ್ಯಕತೆ ಇಲ್ಲದೆ ಮಕ್ಕಳನ್ನು ನಿಂದಿಸುವುದು ಮತ್ತು ಅವರನ್ನು ಪದೇ ಪದೇ ಆಕ್ಷೇಪಿಸುವುದರಿಂದ ಮಕ್ಕಳು ವಿದ್ರೋಹಿಗಳಾಗುತ್ತಾರೆ. ಅವರು ಪ್ರಾಪ್ತವಯಸ್ಕರಾದಾಗ ಅವರು ಧರ್ಮಬದ್ಧ ವಿಷಯಗಳನ್ನು ಕಡೆಗಣಿಸಲು ಪ್ರಾರಂಭಿಸುತ್ತಾರೆ. ಇದೇ ರೀತಿ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಮಕ್ಕಳ ಪರವಾಗಿ ನಿಲ್ಲುವುದು ಸಹ ಮಕ್ಕಳ ತರಬೇತಿ ಮೇಲೆ ಕೆಟ್ಟ ಪ್ರಭಾವ ಬೀರುತ್ತವೆ. ಮಕ್ಕಳು ಬಾಲ್ಯಕಾಲದಿಂದ ತಾರುಣ್ಯಕ್ಕೆ ಹೆಜ್ಜೆ ಹಾಕುವ ಸಂದರ್ಭದಲ್ಲಿ ತಂದೆ ತಾಯಿಗಳ ಈ ವರ್ತನೆ ಅವರ ಮೇಲೆ ಕೆಟ್ಟ ಪ್ರಭಾವ ಬೀರುತ್ತದೆ. ವಿಶಿಷ್ಟವಾಗಿ ತಂದೆಯ ವರ್ತನೆ ಹೆಚ್ಚು ಕೆಟ್ಟ ಪ್ರಭಾವ ಬೀರುತ್ತದೆ. ಇಂತಹ ಪ್ರಾಯದ ಮಕ್ಕಳಿಗೆ ಮನವರಿಕೆ ಮಾಡಿಕೊಡಲು ಸಾಕ್ಷ್ಯಾಧಾರಗಳನ್ನು ನೀಡಿ ಮಾತನಾಡಬೇಕು. ವಿಶಿಷ್ಟವಾಗಿ ಇಂದಿನ ಕಾಲಘಟ್ಟದಲ್ಲಿ ಮಕ್ಕಳ ಮೇಲೆ ತಾವಿರುವ ಸೀಮಿತ ಪರಿಸರದ ಪ್ರಭಾವ ಮಾತ್ರ ಉಂಟಾಗುವುದಿಲ್ಲ. ಅವರ ಮೇಲೆ ದೇಶದ ಮಾತ್ರವಲ್ಲ ಜಗತ್ತಿನದಾದ್ಯಂತವಿರುವ ಪರಿಸರದ ಪ್ರಭಾವ ಉಂಟಾಗುತ್ತಿರುತ್ತದೆ. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ತಂದೆ ತನ್ನ ಮಕ್ಕಳ ತರಬೇತಿಗೆ ವಿಶಿಷ್ಟ ಲಕ್ಷ್ಯ ನೀಡಬೇಕು. ಎಲ್ಲಿ ಮೃದುವಾಗಿ ವರ್ತಿಸಬೇಕು ಎಲ್ಲಿ ಕಠಿಣವಾಗಿ ವರ್ತಿಸಬೇಕು ಹೇಗೆ ಉಪದೇಶಿಸಬೇಕು ಎನ್ನುವುದರ ಬಗ್ಗೆ ಮುತುವರ್ಜಿ ವಹಿಸಬೇಕು. ಇದು ತಂದೆಯ ಹೊಣೆಗಾರಿಕೆಯಾಗಿದೆ. ಈ ಕೆಲಸ ತಾಯಿಗೆ ಮಾತ್ರ ವಹಿಸಿಕೊಡಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಕ್ಕಳಿಗೆ ಹೇಗೆ ತರಬೇತಿ ನೀಡುತ್ತಿದ್ದರು ಎನ್ನುವುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸುತ್ತಾ ಹೀಗೆ ಹೇಳುತ್ತಾರೆ:

ಅಲ್ಲಾಹನು ವಿವಿಧ ಪ್ರಾಣಿಗಳನ್ನು ವಿವಿಧ ಕೆಲಸಗಳಿಗೋಸ್ಕರ ಸೃಷ್ಟಿಸಿರುವನು. ಕೆಲವನ್ನು ಸೃಷ್ಟಿಸಿರುವುದು ಸೌಂದರ್ಯದ ಆಸ್ವಾದನೆಗೋಸ್ಕರವಾಗಿದೆ. ಅಂದರೆ ಅವು ನೋಡಲು ಸುಂದರವಾಗಿರುತ್ತವೆ. ಕೆಲವನ್ನು ಸೃಷ್ಟಿಸಿರುವುದು ಸುಶ್ರಾವ್ಯ ಶಬ್ದಕ್ಕೋಸ್ಕರವಾಗಿದೆ. ಅವುಗಳ ಸ್ವರ ಇಂಪಾಗಿರುತ್ತವೆ. ಕೆಲವನ್ನು ಸೃಷ್ಟಿಸಿರುವುದು ಭಕ್ಷಿಸಲಿಕ್ಕಾಗಿದೆ. ಅವುಗಳ ಮಾಂಸ ರುಚಿಕರವಾಗಿರುತ್ತವೆ. ಕೆಲವು ಪ್ರಾಣಿಗಳ ಮಾಂಸದಲ್ಲಿ ರೋಗ ಶಮನ ಶಕ್ತಿ ಇರುತ್ತದೆ. ಆದುದರಿಂದ ಒಂದು ಪ್ರಾಣಿಯ ಮಾಂಸ ಭಕ್ಷಿಸುವುದು ಧರ್ಮಬದ್ಧ ಎಂಬ ಏಕಮಾತ್ರ ಕಾರಣದಿಂದ ಅದನ್ನು ಭಕ್ಷಿಸುವುದು ಸರಿಯಾದುದಲ್ಲ. ಒಂದು ಪ್ರಾಣಿಯ ಮಾಂಸ ಧರ್ಮಬದ್ಧವೂ ಪರಿಶುದ್ಧವೂ ಆಗಿದ್ದರೂ ಅದರಿಂದ ಹೆಚ್ಚು ಪ್ರಯೋಜನ ಪಡೆಯುವುದು ಹೇಗೆಂದು ನೋಡಬೇಕು. ನಮಗೆ ಪ್ರಯೋಜನ ಲಭಿಸುವಾಗ ಬಹುಸಂಖ್ಯಾತರಿಗೆ ಅದರಿಂದ ಸಿಗುವ ಲಾಭಕ್ಕೆ ಕೊರತೆ ಉಂಟಾಗುತ್ತದೆಯೋ ಎಂದು ಸಹ ನೋಡಬೇಕು. ಮನುಷ್ಯಕುಲಕ್ಕೆ ಸಿಗಬಹುದಾದ ಲಾಭದ ಮೇಲೆ ನಮ್ಮ ಸ್ವಂತ ಲಾಭಕ್ಕೆ ಆದ್ಯತೆ ನೀಡಬಾರದು. ನನಗೆ ಬಾಲ್ಯಕಾಲದಲ್ಲಿಯೇ ಈ ಪಾಠವನ್ನು ಕಲಿಸ ಲಾಗಿತ್ತು. ನಾನು ಬಾಲ್ಯದಲ್ಲಿ ಒಂದು ಗಿಳಿಯನ್ನು ಬೇಟೆಯಾಡಿ ಮನೆಗೆ ತಂದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮಹ್‌ಮೂದ್, ಗಿಳಿಯ ಮಾಂಸ ನಿಷಿದ್ಧವೇನೂ ಅಲ್ಲ. ಆದರೆ ಅಲ್ಲಾಹನು ಪ್ರತಿಯೊಂದು ಪ್ರಾಣಿಯನ್ನು ಸೃಷ್ಟಿಸಿರುವುದು ತಿನ್ನಲಿಕ್ಕಾಗಿಯಲ್ಲ. ಕೆಲವು ಸುಂದರ ಪ್ರಾಣಿಗಳನ್ನು ಸೃಷ್ಟಿಸಿರುವುದು ನೋಡಿ ಸಂತೋಷಪಡಲಿಕ್ಕಾಗಿವೆ. ಅವುಗಳನ್ನು ನೋಡಿ ಕಣ್ಣುಗಳು ಸುಖ ಪಡೆಯುತ್ತವೆ. ಕೆಲವು ಪ್ರಾಣಿಗಳ ಸ್ವರ ಇಂಪಾಗಿರುತ್ತವೆ. ಅವುಗಳ ಸ್ವರ ವನ್ನು ಆಲಿಸಿ ಕಿವಿಗಳು ಆನಂದ ಪಡೆಯುತ್ತವೆ. ಅಲ್ಲಾಹನು ಮನುಷ್ಯನ ಪಂಚೇಂದ್ರಿಯಗಳಿಗೆಲ್ಲಾ ಅನುಗ್ರಹ ದಯಪಾಲಿಸಿದ್ದಾನೆ. ಅವುಗಳನ್ನೆಲ್ಲಾ ಕಿತ್ತುಕೊಂಡು ಕೇವಲ ನಾಲಗೆಗೆ ಮಾತ್ರ ನೀಡುವುದು ಸರಿಯಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ರೀತಿ ಸುಂದರವಾಗಿ ತರಬೇತಿ ನೀಡಿದರು. ಅದು ಹೃದಯದ ಮೇಲೆ ಪ್ರಭಾವ ಬೀರುವುದಾಗಿರುತ್ತದೆ. ಅಲ್ಲಾಹನು 'ಹಲಾಲ್ ಮತ್ತು ಪರಿಶುದ್ಧವಾದುದನ್ನು ಭಕ್ಷಿಸಿರಿ' ಎಂದು ಆಜ್ಞೆ ನೀಡಿರುವುದನ್ನು ಜಾಗರೂಕತೆಯಿಂದಲೂ ವಿವೇಚನೆಯಿಂದಲೂ ಪಾಲಿಸಬೇಕಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ ಬೇರೆ ಕೆಲವು ಘಟನೆಗಳನ್ನು ಸಹ ವಿವರಿಸುವೆನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಲೋಕದಿಂದ ಬಿದ್‌ಅತ್ (ನವೀನ ಆಚರಣೆ) ಗಳನ್ನು ದೂರ ಸರಿಸಲು ಮತ್ತು ಇಸ್ಲಾಮ್ ಧರ್ಮದ ಸುಂದರ ತತ್ವಗಳನ್ನು ಪ್ರಕಟಿಸಲು ಆಗಮಿಸಿದ್ದರು. ಅವರು ಸ್ವತಃ ಯಾವುದಾದರೂ ನವೀನಾಚರಣೆ ಹರಡಿದರು ಎಂದು ಹೇಳಲು ಹೇಗೆ ತಾನೆ ಸಾಧ್ಯ? ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಕುರಿತು ಒಂದು ಘಟನೆ ಹೀಗೆ ವಿವರಿಸಿರುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಫೋಟೋ ತೆಗಿಸಿದ್ದರು. ಆದರೆ ಒಬ್ಬರು ಒಂದು ಪೋಸ್ಟ್ ಕಾರ್ಡ್‌ನಲ್ಲಿ ಅವರ ಫೋಟೋ ಮುದ್ರಿಸಿ ಅವರಿಗೆ ತೋರಿಸಿದಾಗ ಅವರು ಹೇಳಿದರು: 'ಈ ರೀತಿ ಮಾಡಲು ನಾನು ಅನುಮತಿ ನೀಡುವುದಿಲ್ಲ'. ಇಂತಹ ಕಾರ್ಡ್ ಯಾರೂ ಖರೀದಿಸಬಾರದೆಂದು ಅವರು ಹೇಳಿದರು. ಇದರ ಪರಿಣಾಮವಾಗಿ ಅನಂತರ ಇಂತಹ ಕೆಲಸ ಮಾಡಲು ಯಾರಿಗೂ ಧೈರ್ಯ ಉಂಟಾಗಲಿಲ್ಲ. ಆದರೆ ಇಂದಿನ ಕಾಲದಲ್ಲಿ ಕೆಲವರು ಟ್ವೀಟ್‌ಗಳಲ್ಲಿ ಮತ್ತು ವಾಟ್ಸ್‌ಅಪ್‌ಗಳಲ್ಲಿ ಇಂತಹ ಕಾರ್ಡ್‌ಗಳನ್ನು ಪ್ರಕಟಿಸಲು ಪ್ರಾರಂಭಿಸಿದ್ದಾರೆ. ಹಿಂದೆ ಯಾವುದೋ ಕಾಲದಲ್ಲಿ ಮುದ್ರಿತವಾದ ಕಾರ್ಡ್‌ಗಳು ತಮ್ಮ ಹಿರಿಯರಿಂದ ಅಥವಾ ಅಂಗಡಿಯಿಂದ ಖರೀದಿಸಿ ಪ್ರಕಟಿಸುತ್ತಿದ್ದಾರೆ. ಇದು ತಪ್ಪಾದ ರೀತಿಯಾಗಿದೆ. ಇದನ್ನು ಕೊನೆಗೊಳಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಫೋಟೋ ತೆಗೆಸಿರುವುದು, ದೂರ ದೇಶಗಳಲ್ಲಿರುವ ಜನರು ಮತ್ತು ಮುಖ ಲಕ್ಷಣಗಳನ್ನು ಪರಿಗಣಿಸುವ ಯುರೋಪಿಯನ್ ಜನರು ತಮ್ಮ ಚಿತ್ರ ನೋಡಿ ಸತ್ಯವನ್ನು ಮನವರಿಕೆ ಮಾಡಿಕೊಳ್ಳಲಿ ಎಂಬುದಕ್ಕಾಗಿದೆ. ಕಾರ್ಡ್‌ಗಳಲ್ಲಿ ಫೋಟೋ ಮುದ್ರಿಸಿ ಜನರು ವ್ಯಾಪಾರ ಮಾಡಲು ಪ್ರಯತ್ನಿಸುತ್ತಿದ್ದಾರೆ

ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮನವರಿಕೆ ಮಾಡಿದಾಗ ಈ ನವೀನಾಚರಣೆ ಹರಡದಂತೆ ಅವರು ಬಲವಾಗಿ ತಡೆದರು. ಕೆಲವು ಸಾರಿ ಅವರು ಅಂತಹ ಚಿತ್ರಗಳನ್ನು ನಾಶ ಮಾಡಬೇಕೆಂದು ಸಹ ಹೇಳಿದ್ದರು.

ಕೆಲವು ಜನರು ಚಿತ್ರಗಳ ವ್ಯಾಪಾರ ಮಾಡುತ್ತಿದ್ದಾರೆ. ಅವರು ಚಿತ್ರಗಳಿಗೆ ಬಹಳ ಹೆಚ್ಚು ಬೆಲೆ ವಸೂಲು ಮಾಡುತ್ತಿದ್ದಾರೆ. ಅಂತಹ ಜನರು ಇದರ ಬಗ್ಗೆ ಶ್ರದ್ಧೆ ನೀಡಬೇಕು. ಕೆಲವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರಗಳಿಗೆ ಬಣ್ಣ ನೀಡಿ ಪ್ರಕಟಿಸುತ್ತಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಯಾವುದೇ ವರ್ಣಚಿತ್ರ (Coloured Photo) ಇರುವುದಿಲ್ಲ. ಇಂತಹ ಚಿತ್ರಗಳನ್ನು ಪ್ರಕಟಿಸುವುದು ಬಹಳ ದೊಡ್ಡ ತಪ್ಪಾಗಿದೆ. ಈ ಬಗ್ಗೆ ಸಹ ಗಮನ ಹರಿಸಬೇಕಾದ ಅಗತ್ಯವಿದೆ. ಇದೇ ರೀತಿ ಖಲೀಫರ ಚಿತ್ರಗಳನ್ನು ತಪ್ಪಾಗಿ ಬಳಸುವ ಬಗ್ಗೆ ಸಹ ಜಾಗರೂಕತೆ ವಹಿಸಬೇಕು.

ಒಮ್ಮೆ ಸಿನಿಮಾ ಮತ್ತು ಬೈಸ್ಕೋಪ್ ಬಗ್ಗೆ ಒಂದು ಮಜ್ಲಿಸ್ ಶೂರಾ ದಲ್ಲಿ ಚರ್ಚಿಸಲಾಯಿತು. ಆಗ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು: ಸಿನಿಮಾ, ಬೈಸ್ಕೋಪ್, ಫೋನೋ ಗ್ರಾಫ್ ಇವುಗಳು ವಾಸ್ತವದಲ್ಲಿ ಕೆಟ್ಟದೆಂದು ಹೇಳುವುದು ಸರಿಯಲ್ಲ. ಫೋನೋಗ್ರಾಫ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿ ಸ್ಸಲಾಮರ ಒಂದು ಪದ್ಯ ರಿಕಾರ್ಡ್ ಮಾಡಿ ಹಿಂದುಗಳನ್ನು ಜಮಾಯಿಸಿ ಅವರಿಗೆ ಕೇಳಿಸಲಾಗಿತ್ತು. ಆ ಪದ್ಯದ ಆರಂಭ ಹೀಗೆ: **ಆವಾಝ್ ಆ ರಹೀ ಹೈ ಯೆ ಫೋನೋಗ್ರಾಫ್‌ಸೆ ಡೊಂಡೋ ಖುದಾ ಕೊ ದಿಲ್ ಸೆ ನ ಲಾಫೋ ಗುಝಾಫ್‌ಸೆ.** (ಈ ಫೋನೋಗ್ರಾಫ್‌ನಿಂದ ಧ್ವನಿ ಕೇಳಿಸುತ್ತಿದೆ ದೇವನನ್ನು ಹೃದಯದ ಮೂಲಕ ಹುಡುಕಿರಿ, ಹಾಳು ಹರಟೆಗಳ ಮೂಲಕವಲ್ಲ).

ಅದೇ ರೀತಿ ಸಿನಿಮಾ ಸಹ ಸ್ವತಃ ಕೆಟ್ಟದೇನೂ ಅಲ್ಲ. ಕೆಲವರು ಸಿನಿಮಾ ನೋಡಲು ಹೋಗುವುದು ಪಾಪ ಕೃತ್ಯವೇನೂ ಅಲ್ಲವಲ್ಲ ಎಂದು ಪ್ರಶ್ನಿಸುತ್ತಾರೆ. ಸಿನಿಮಾ ಸ್ವತಃ ಕೆಟ್ಟದೇನೂ ಅಲ್ಲ. ಆದರೆ ಇಂದಿನ ಕಾಲದಲ್ಲಿ ಅದರ ರೂಪ ದುರ್ಗುಣದಾಯಕವಾಗಿದೆ. ಒಂದು ಸಿನಿಮಾ ಪೂರ್ಣವಾಗಿ ತಬ್ಲೀಗ್ ಅಥವಾ ತಅಲೀಮ್ ನೀಡುವುದಾಗಿದ್ದರೆ ಅದರಲ್ಲಿ ಮನೋರಂಜಕ ತಮಾಷೆಗಳಿಲ್ಲದಿದ್ದಲ್ಲಿ ಅದರಲ್ಲಿ ದೋಷವೇನೂ ಇಲ್ಲ. ಆದರೆ ಅದರಲ್ಲಿ ನಾಟಕೀಯತೆ ಇರಬಾರದು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನನ್ನ ಅಭಿಪ್ರಾಯದಲ್ಲಿ ತಬ್ಲೀಗ್‌ಗೋಸ್ಕರ ಸಹ ಅಭಿನಯ ಧರ್ಮಬದ್ಧವಲ್ಲ ಅದು ತಪ್ಪಾದ ರೀತಿಯಾಗಿದೆ.

ಈ ವಿಷಯ, ಎಂ.ಟಿ.ಎ. ಬಗ್ಗೆ ಅದರಲ್ಲಿ ಕೆಲವು ಸಾರಿ ಸಂಗೀತ ಕಾರ್ಯಕ್ರಮವಿದ್ದರೆ ಅಡ್ಡಿ ಇಲ್ಲ ಎಂದು ಹೇಳುವವರು ಸ್ಪಷ್ಟವಾಗಿ ತಿಳಿದು ಕೊಳ್ಳಬೇಕು. ಅದೇ ರೀತಿ ಈಗ ಪ್ರಾರಂಭವಾಗಿರುವ ವಾಯಿಸ್ ಆಫ್ ಇಸ್ಲಾಮ್ ರೇಡಿಯೋ ಕಾರ್ಯಕ್ರಮದಲ್ಲಿಯೂ ಸಂಗೀತವಿದ್ದರೆ ಅಡ್ಡಿ ಇಲ್ಲ ಎಂದು ಕೆಲವರು ಹೇಳುತ್ತಾರೆ. ಇದು ಸಹ ಸರಿಯಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಂತಹ ವಿಚಾರಗಳನ್ನು, ನವೀನಾಚರಣೆಗಳನ್ನು ಕೊನೆಗೊಳಿಸಲು ಆಗಮಿಸಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವೇನಿತ್ತು ಎಂಬುದರ ಬಗ್ಗೆ ನಾವು ಗಮನ ಹರಿಸಬೇಕಾಗಿದೆ. ಹೊಸ ಆವಿಷ್ಕಾರ ಗಳಿಂದ ಲಾಭ ಪಡೆಯುವುದು ನಿಷಿದ್ಧವಲ್ಲ. ಅವು ನವೀನಾಚರಣೆ (ಬಿದ್‌ಅತ್) ಸಹ ಅಲ್ಲ. ಆದರೆ ಅವುಗಳನ್ನು ತಪ್ಪಾಗಿ ಬಳಸುವುದು ಬಿದ್‌ಅತ್ (ನವೀನಾಚರಣೆ) ಆಗಿದೆ. ಕೆಲವು ಜನರು ಹೀಗೆ ಸಲಹೆ ನೀಡುತ್ತಾರೆ: ನಾಟಕದ ರೂಪದಲ್ಲಿ ತಬ್ಲೀಗೀ ಕಾರ್ಯಕ್ರಮ ಮತ್ತು ತರಬೇತಿ ಕಾರ್ಯಕ್ರಮ ರಚಿಸಿ ಪ್ರಸಾರಗೊಳಿಸಿದರೆ ಅದು ಒಳ್ಳೆಯ ಫಲ ನೀಡಬಹುದು ಎಂದು. ಅಂತಹ ಜನರು ನೆನಪಿಡಬೇಕಾದುದೇನೆಂದರೆ: ನೀವು ಒಂದು ತಪ್ಪು ಕೆಲಸ ಪ್ರಾರಂಭಿಸಿದರೆ, ಯಾವುದಾದರೂ ಕಾರ್ಯ ಕ್ರಮದಲ್ಲಿ ಒಂದು ತಪ್ಪು ಪ್ರವೇಶವಾಗುವಂತೆ ಮಾಡಿದರೆ, ಸ್ವಲ್ಪ ಸಮ ಯದ ನಂತರ ಅದರಲ್ಲಿ ನೂರಾರು ರೀತಿಯ ನವೀನಾಚರಣೆಗಳು ತಾನಾಗಿ ಪ್ರಾರಂಭವಾಗುವುವು. ಅನ್ಯರ ಬಳಿ ಪವಿತ್ರ ಖುರ್‌ಆನನ್ನು ಸಹ ಸಂಗೀತ ದೊಂದಿಗೆ ಪಠಿಸುವುದು ಧರ್ಮಬದ್ಧವಾಗಿದೆ. ಆದರೆ ಓರ್ವ ಅಹ್ಮದಿ ಬಿದ್‌ಅತ್‌ಗಳ (ನವೀನಾಚರಣೆಗಳ) ವಿರುದ್ಧ ಜಿಹಾದ್ ಮಾಡಬೇಕಾಗಿದೆ. ನಾವು ಇಂತಹ ವಿಷಯಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ನಾವು ಇಂತಹವುಗಳಿಂದ ಸುರಕ್ಷಿತರಾಗಿರಲು ಬಹಳ ಪ್ರಯತ್ನಮಾಡಬೇಕು. ಈ ನವೀನಾಚರಣೆಗಳು ಹಬ್ಬುವಾಗ ಜನರ ಯೋಚನೆಗಳು ಸಹ ಬದಲಾವಣೆ ಹೊಂದುತ್ತವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಡಾಕ್ಟರ್‌ಗಳ ಬಗ್ಗೆ ಹೀಗೆ ಹೇಳಿದ್ದರು: ಭಾರತದಲ್ಲಿ ಶೇಕಡಾ 99ರಷ್ಟು ಮಂದಿ ಡಾಕ್ಟರ್‌ಗಳು ಅನ್ಯರಿಂದ ಸಲಹೆ ಕೇಳುವುದು ಅಪಮಾನಕರ ವೆಂದು ಭಾವಿಸುತ್ತಾರೆ. 1918ರಲ್ಲಿ ನಾನು ರೋಗ ಪೀಡಿತನಾದಾಗ ನಾನು ವೈದ್ಯರಿಂದ ಮತ್ತು ಡಾಕ್ಟರ್‌ಗಳಿಂದ ಔಷಧಿಗಳನ್ನು ಪಡೆದು ಸೇವಿಸುತ್ತಿ ದ್ದೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಹೀಗೆಯೇ ಮಾಡುತ್ತಿದ್ದರು. ಯಾವ ಔಷಧಿಯಿಂದ ಅಲ್ಲಾಹನು ರೋಗೋ ಪಶಮನ ನೀಡುವನೆಂದು ಔಷಧಿ ನೀಡುವವರಿಗೆ ತಿಳಿದಿರುವುದಿಲ್ಲವಷ್ಟೆ. ಯಾರಾದರೂ ಡಾಕ್ಟರ್ ತನ್ನನ್ನು ದೇವನೆಂದು ಭಾವಿಸುವುದಾದರೂ ನಾವು ಡಾಕ್ಟರ್‌ನನ್ನು ದೇವನ ದಾಸನೆಂದೇ ಭಾವಿಸುತ್ತೇವೆ. ಕೆಲವರು ಗಿಡ ಮೂಲಿಕೆಗಳ ಮೂಲಕ ಚಿಕಿತ್ಸೆ ನೀಡುತ್ತಾರಾದರೂ ಅವರು ವೈದ್ಯರಾಗಿರು ವುದಿಲ್ಲ. ಅಂತಹ ಜನರು ಅತ್ಯಂತ ಉತ್ತಮ ಚಿಕಿತ್ಸೆ ನೀಡುತ್ತಾರೆ. ಕೆಲವು ಸಾರಿ ಡಾಕ್ಟರ್‌ಗಳು ಗುಣಪಡಿಸಲಾಗದ ರೋಗಗಳನ್ನು ಇಂತಹ ಜನರು ಗಿಡಮೂಲಿಕೆಗಳ ಮೂಲಕ ಗುಣಪಡಿಸುತ್ತಾರೆ. ಸಯ್ಯಿದ್ ಅಹ್ಮದ್ ನೂರ್ ಕಾಬುಲಿ ಅವರ ಮೂಗಿನಲ್ಲಿ ಗಾಯವಾಗಿತ್ತು. ಅನೇಕರಿಂದ ಚಿಕಿತ್ಸೆ ನಡೆಸಿದರು. ಲಾಹೋರಿನ ಮ್ಯೂರ್ ಹಾಸ್ಪಿಟಲ್‌ನಲ್ಲೂ ಚಿಕಿತ್ಸೆ ನಡೆಸಿದರು. ಎಕ್ಸ್‌ರೇ ತೆಗೆದು ಚಿಕಿತ್ಸೆ ನಡೆಸಲಾಯಿತು. ಆದರೆ ಗಾಯ ಗುಣವಾಗಲಿಲ್ಲ. ಕೊನೆಗೆ ಪೇಶಾವರದಲ್ಲಿ ಒಬ್ಬ ಕ್ಷೌರಿಕನಿಂದ ಚಿಕಿತ್ಸೆ ಪಡೆದರು. ಕೇವಲ ಮೂರು ದಿನಗಳ ಮದ್ದಿನಿಂದ ಅವರ ಗಾಯ ಒಣಗಿತು. ಈಗಲೂ ಇಂತಹ ಕೆಲವು ನಿಷ್ಣಾತ ಜನರಿದ್ದಾರೆ. ಅವರಿಗೆ ಎಂತಹ ವಿದ್ಯೆ ತಿಳಿದಿದೆ ಎಂದರೆ ಅವುಗಳನ್ನು ಜೀವಂತವಾಗಿರಿಸಿದರೆ ಮುಂದೆ ಅನೇಕ ವೃತ್ತಿಗಳು ಜಾರಿಗೊಳ್ಳುವುವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಬ್ಬ ಕ್ಷೌರಿಕನಿಗೆ ಒಂದು ಲೇಪನದ ಬಗ್ಗೆ ತಿಳಿದಿತ್ತು. ಅದರ ಮೂಲಕ ಬಹಳ ದೊಡ್ಡ ಗಾಯಗಳು ಸಹ ಗುಣವಾಗುತ್ತಿದ್ದುವು. ಜನರು ದೂರ ದೂರ ಪ್ರದೇಶಗಳಿಂದ ಅವನಿಂದ ಚಿಕಿತ್ಸೆ ಪಡೆಯಲು ಬರುತ್ತಿದ್ದರು. ಅವನ ಮಗ ಅದನ್ನು ತಯಾರಿಸುವ ವಿಧಾನವನ್ನು ವಿಚಾರಿಸಿದಾಗಲೆಲ್ಲಾ ಅವನು ಹೇಳುತ್ತಿದ್ದನು: ಇದನ್ನು ತಿಳಿದವರು ಲೋಕದಲ್ಲಿ ಇಬ್ಬರಿರಬಾ ರದು. ನನ್ನ ವಿದ್ಯೆ ನನ್ನಲ್ಲಿಯೇ ಇರಲಿ ಎಂದು ಹೇಳುತ್ತಿದ್ದನು. ಅವನು ತನ್ನ ಮಗನಿಗೆ ಸಹ ಅದನ್ನು ಹೇಳಿಕೊಡಲಿಲ್ಲ ಕೊನೆಗೆ ಅವನು ವೃದ್ಧನಾಗಿ ಕಠಿಣ ರೋಗಬಾಧಿತನಾದನು. ಆಗ ಮಗ ಹೇಳಿದನು: ಈಗಲಾದರೂ ನನಗೆ ತಿಳಿಸಿರಿ. ನಿಮ್ಮ ಜೀವಿತದ ಭರವಸೆ ಏನೂ ಇಲ್ಲವಲ್ಲ. ಆಗ ಅವನು ಹೇಳಿದನು: ನಾನು ಸಾಯುವೆನೆಂದು ನೀವು ಭಾವಿಸುವುದಾದರೆ ನಾನು ನಿನಗೆ ಹೇಳಿಕೊಡುವೆನು ಎಂದು ಹೇಳಿದನು. ಆದರೆ ಅನಂತರ ಅವನು ಹೇಳಿದನು: ನಾನು ಪುನಃ ರೋಗ

ಮುಕ್ತನಾಗಲೂಬಹುದು. ಹೀಗೆ ಹೇಳಿ ಅವನು ಲೇಪನದ ರಹಸ್ಯ ಹೇಳಲಿಲ್ಲ. ಅವನು ಕೆಲವು ಗಂಟೆಗಳ ನಂತರ ಸತ್ತನು. ಅವನ ಮಗನಿಗೆ ಮದ್ದಿನ ರಹಸ್ಯ ತಿಳಿಯಲಿಲ್ಲ.

ಜಿಪುಣತನ ಅಭಿವೃದ್ಧಿಗೆ ತಡೆಯಾಗುತ್ತದೆಯಲ್ಲದೆ ಅಪಮಾನಕ್ಕೆ ಸಹ ಕಾರಣವಾಗುತ್ತದೆ. ಜ್ಞಾನಕ್ಕೆ ಸಂಬಂಧಿಸಿ ಜಿಪುಣತೆಯಿಂದ ವರ್ತಿಸ ಬಾರದು. ಜ್ಞಾನವನ್ನು ಹಬ್ಬಿಸಲು ಪ್ರಯತ್ನಿಸಬೇಕು. ಇಂತಹ ವಿದ್ಯೆಗಳನ್ನೂ ನೈಪುಣ್ಯತೆಗಳನ್ನೂ ಗಳಿಸುವುದು ಹಾನಿಕರವಲ್ಲ ಅವು ಪ್ರಯೋಜನಕರ ವಾಗಿವೆ. ಅವುಗಳ ಮೂಲಕ ಜ್ಞಾನ ವರ್ಧಿಸುತ್ತದೆ. ಇಂತಹ ನೈಪುಣ್ಯತೆ ಗಳನ್ನು ಮತ್ತು ಸತ್ತುಹೋದ ವಿದ್ಯೆಗಳನ್ನು ಪುನಶ್ಚೇತನಗೊಳಿಸಬೇಕು. ಕೆಲವು ಸ್ಥಳಗಳಲ್ಲಿ ಡಾಕ್ಟರ್‌ಗಳು ತಮ್ಮ ಅಹಂಭಾವದ ಕಾರಣದಿಂದ ಅನ್ಯರಿಗೆ ಕಷ್ಟ ಬರಿಸುವವರಾಗುತ್ತಾರೆ. ಕೆಲವು ಸ್ಥಳಗಳಲ್ಲಿ ಅಜ್ಞಾನದ ಕಾರಣದಿಂದ ಜ್ಞಾನವು ಕೊನೆಗೊಳ್ಳುತ್ತಿದೆ. ಲೋಕಕ್ಕೆ ಸಿಗಬೇಕಾದ ಪ್ರಯೋಜನ ಸಿಗದೆ ಹೋಗುತ್ತದೆ. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಈ ಪರಿಸ್ಥಿತಿ ಸಾಮಾನ್ಯವಾಗಿದೆ. ಅಹ್ಮದಿಯಾ ಜಮಾಅತ್ ಇಂತಹ ಪ್ರದೇಶಗಳಲ್ಲಿ ಅಜ್ಞಾನವನ್ನು ದೂರ ಸರಿಸಲು ವಿಶಿಷ್ಟವಾಗಿ ಪ್ರಯತ್ನಿಸಬೇಕು.

ಜನರು ವಿವಿಧ ಸ್ವಭಾವ ಗುಣಗಳನ್ನು ಹೊಂದಿರುತ್ತಾರೆ. ಕೆಲವರು ನಿಷ್ಠೆಯಲ್ಲಿ ಬಹಳ ವೃದ್ಧಿಗಳಿಸಿರುತ್ತಾರೆ. ಅವರು ಪ್ರತಿಯೊಂದು ವಿಷಯ ವನ್ನು ವಿಶಾಲ ಹೃದಯದಿಂದ ಅಂಗೀಕರಿಸುತ್ತಾರೆ. ಕೆಲವರು ಬಹಳ ಅವಸರದಿಂದ ವರ್ತಿಸುವವರಾಗಿರುತ್ತಾರೆ. ಅವರ ಸಂಕಲ್ಪ ಕೆಟ್ಟದಾಗಿರದಿ ದ್ದರೂ ಅವರು ಅವಸರದಿಂದ ಆಕ್ಷೇಪಿಸುತ್ತಾರೆ. ಅಥವಾ ಅವರು ಆಡುವ ಮಾತು ಆಕ್ಷೇಪ ಸೂಚಕವಾಗಿರುತ್ತದೆ. ಇಂತಹ ಜನರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: 1905ರ ಏಪ್ರಿಲ್ ದಿನಾಂಕ 4ರಂದು ಭೀಕರ ಭೂಕಂಪ ಉಂಟಾಯಿತು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಭೂಕಂಪಗಳುಂಟಾಗುವ ಬಗ್ಗೆ ಅನೇಕ ಇಲ್‌ಹಾಮ್ ಗಳು ಅವತೀರ್ಣಗೊಂಡಿದ್ದವು. ಭೂಕಂಪಗಳುಂಟಾಗುವುವು ಎಂದು ಅನೇಕ ಇಲ್‌ಹಾಮ್‌ಗಳು ಲಭಿಸಿದುವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನ ವಚನಗಳಿಗೆ ಗೌರವ ನೀಡಿ ಮನೆಯಿಂದ ಹೊರಗೆ ತೋಟದಲ್ಲಿ ವಾಸಿಸಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಕೆಲವು ಅವಿವೇಕಿಗಳು ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ಲೇಗ್ ರೋಗದ ಬಗ್ಗೆ ಹೆದರಿ ಮನೆ ಯಿಂದ ತೋಟಕ್ಕೆ ಹೋದರೆಂದು. ವಾಸ್ತವದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ಲೇಗ್ ರೋಗದ ಭಯದಿಂದ ಮನೆಬಿಟ್ಟು ಹೊರಗೆ ಹೋಗುತ್ತಿರಲಿಲ್ಲ. ಕೆಲವು ಜನರು ಯೋಚಿಸದೆ ಅವಸರದಿಂದ ಆಕ್ಷೇಪ ಮಾಡುತ್ತಾರೆ. ಹೀಗೆ ಮಾಡುವುದರಿಂದ ಅಹ್ಮದಿಯರು ತಮ್ಮನ್ನು ರಕ್ಷಿಸಿಕೊಳ್ಳಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಖುತ್‌ಬ ಇಲ್‌ಹಾಮಿಯದ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನೋಡುತ್ತಾ ಇದ್ದರು. ಅದರ ಬಗ್ಗೆ ಹೀಗೆ ಹೇಳುತ್ತಾರೆ: ಆಗ ನಾನು ಚಿಕ್ಕವನಾಗಿದ್ದ ಕಾರಣ ನನಗೆ ಅರಬಿ ಭಾಷೆ ಅರ್ಥವಾಗುತ್ತಿರಲಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಎಂತಹ ಸುಂದರ ಆಧ್ಯಾತ್ಮಿಕ ರೂಪ ಹೊಂದಿದ್ದರೆಂ ದರೆ ನಾನು ಆರಂಭದಿಂದ ಅಂತ್ಯದ ತನಕ ಖುತ್‌ಬ ಆಲಿಸುತ್ತಾ ಇದ್ದೆ. ಆದರೆ ನನಗೆ ಅದರ ಒಂದು ಶಬ್ದ ಸಹ ಅರ್ಥವಾಗುತ್ತಿರಲಿಲ್ಲ.

ಖಾದಿಯಾನಿನ ಮಸ್‌ಜಿದ್ ಮುಬಾರಕ್ ಇದರ ಮಹತ್ವದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಕೆಲವು ಸ್ನೇಹಿತರು ಹೇಳಿದರು ಖುತ್‌ಬ ಇಲ್‌ಹಾಮಿಯದ ಜೊತೆಗೆ ಸೇರಿಸಿರುವ ವಿಜ್ಞಾಪನೆಯಲ್ಲಿ ಮಸ್‌ಜಿದ್ ಮುಬಾರಕ್ ಯಾವುದೆಂದು ಸ್ಪಷ್ಟವಾಗುವುದಿಲ್ಲ ಎಂದು. ಆಗ ಹಝ್ರತ್ ಮುಸ್ಲಿಹ್ ಮೌಊದ್ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿರ್ಮಿಸಿದ ಮಸ್‌ಜಿದ್, ಮಸ್‌ಜಿದ್ ಮುಬಾರಕ್ ಆಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಸಹ ಹೇಳಿದರು: ಒಮ್ಮೆ ಹಝ್ರತ್ ಉಮ್ಮುಲ್ ಮೂಮಿನೀನ್ (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪತ್ನಿ) ರೋಗಿಯಾದರು. ಅವರಿಗೆ ನಲ್ವತ್ತು ದಿನಗಳ ಕಾಲ ರೋಗ ಬಾಧಿಸಿತು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನಗೆ ಲಭಿಸಿದ ಇಲ್‌ಹಾಮ್ ಸಂಕ್ಷಿಪ್ತವಾಗಿ ಹೀಗೆ ಪ್ರಕಟಿಸಿದರು.

**ಮುಬಾರಿಕುನ್ ವ ಮುಬಾರಕುನ್ ವ ಕುಲ್ಲು ಅಮ್‌ರಿನ್ ಮುಬಾರಕಿನ್ ಯಜ್‌ಅಲ ಫೀಹಿ.** (ಅನುಗ್ರಹ ನೀಡುವುದು, ಅನುಗ್ರಹ ನೀಡಲ್ಪಟ್ಟದ್ದು ಎಲ್ಲ ಅನುಗ್ರಹಗಳನ್ನು ಅದರಲ್ಲಿ ಇರಿಸಲಾಗಿದೆ). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಇದು ಇಲ್‌ಹಾಮ್ ಆಗಿದೆ. ಈ ಮಸ್‌ಜಿದ್‌ಗೆ ಸಂಬಂಧಿಸಿದೆ. ಆದುದರಿಂದ ಈ ಮಸ್‌ಜಿದ್‌ನೊಳಗೆ ಹೋಗಿ ಮದ್ದು ಕೊಡುವೆವು. ಹಾಗೆ ಉಮ್ಮುಲ್ ಮೂಮಿನೀನ್‌ರನ್ನು ಮಸ್‌ಜಿದ್ ಮುಬಾರಕ್‌ಗೆ ಕರೆದುಕೊಂಡು ಹೋಗಿ ಮದ್ದು ಕುಡಿಸಿದ ನಂತರ ಎರಡು ಗಂಟೆಯೊಳಗೆ ಹಝ್ರತ್ ಉಮ್ಮುಲ್ ಮೂಮಿನೀನ್ ಗುಣಮುಖರಾದರು.

ಡಾಕ್ಟರ್‌ಗಳಿಗೆ ಒಂದು ಉಪದೇಶವೇನೆಂದರೆ ಅವರು ಧಾರ್ಮಿಕ ಸೇವೆ ಮಾಡುವ ಕರ್ತವ್ಯ ಈಡೇರಿಸಬೇಕು. ಸತ್ಯದ ಪ್ರಭಾವ ರೋಗಿಗಳ ಮೇಲೆ ಬೇಗನೆ ಉಂಟಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಬ್ಬ ಡಾಕ್ಟರ್ ಕೇಳಿದರು: ನಾನು ಧರ್ಮಕ್ಕೆ ಯಾವ ಸೇವೆ ಸಲ್ಲಿಸಬಹುದು? ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ರೋಗಿಗಳಿಗೆ ತಬ್ಲೀಗ್ ಮಾಡಿರಿ. ರೋಗಿಗಳ ಹೃದಯ ಮೃದುವಾಗಿರುತ್ತದೆ. ಆದುದರಿಂದ ಅದು ಉತ್ತಮ ಸಂದರ್ಭವಾಗುತ್ತದೆ ಎಂದು. ಈ ಕಾಲಘಟ್ಟದ ಡಾಕ್ಟರ್‌ಗಳು ಸಹ ಹೀಗೆ ವರ್ತಿಸಬೇಕು. ಲೌಕಿಕ ಲಾಭ ಪಡೆಯುವ ಜೊತೆಗೆ ಧಾರ್ಮಿಕ ಸೇವೆ ನಡೆಸುವಾಗ ಅಲ್ಲಾಹನಿಂದ ಅನುಗ್ರಹ ಸಹ ಲಭಿಸುವುದು.

ಇಂದಿನ ಕಾಲದಲ್ಲಿ ಪಶ್ಚಿಮದ ದೇಶಗಳಲ್ಲಿ ಪರದೆಯ ಬಗ್ಗೆ ಬಹಳ ಜೋರಾಗಿ ಪ್ರಸ್ತಾಪಿಸಲಾಗುತ್ತಿದೆ. ಮಹಿಳೆಯರ ಹಕ್ಕುಗಳ ಹೆಸರಿನಲ್ಲಿ, ಭೀಕರವಾದವನ್ನು ಕೊನೆಗೊಳಿಸುವ ಹೆಸರಿನಲ್ಲಿ ಅಥವಾ ಅನಾವಶ್ಯಕ ವಾಗಿ ಇಸ್ಲಾಮ್ ಬಗ್ಗೆ ಆಕ್ಷೇಪಿಸಲು ಈ ವಿಷಯವನ್ನು ಚರ್ಚಿಸಲಾಗು ತ್ತಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಪರದೆಯ ವಿವಿಧ ಪಾರ್ಶ್ವಗಳನ್ನು ವಿವರಿಸಿದ್ದಾನೆ. ಯಾವ ರೀತಿ ಪರದೆ ಧರಿಸಬೇಕು. ಯಾವ ಪರಿಸ್ಥಿತಿಗಳಲ್ಲಿ ಪರದೆ ಧರಿಸಬೇಕು ಎಂದು ವಿವರಿಸಲಾಗಿದೆ. ಮಹಿಳೆಯ ಸೌಂದರ್ಯ ಪ್ರಕಟಗೊಳ್ಳುವ ಬಗ್ಗೆ **ಇಲ್ಲಾ ಮಾ ಝಹರ ಮಿನ್‌ಹಾ** ಎಂದು ಹೇಳಲಾಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ವಿವರಣೆ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: **ಇಲ್ಲಾ ಮಾ ಝಹರ ಮಿನ್‌ಹಾ** ಎಂದರೆ ತಾನಾಗಿಯೇ ಕಾಣಿಸಿಕೊಳ್ಳುವುದು ಮತ್ತು ಯಾವುದಾದರೂ ನಿರ್ಬಂಧಿತ ಅವಸ್ಥೆಯಲ್ಲಿ ಮರೆಯಾಗಿರಿಸಲು ಸಾಧ್ಯ ವಾಗದುದು ಎಂದಾಗಿದೆ. ಉದಾಹರಣೆಗೆ ಶರೀರದ ಆಕಾರ, ಎತ್ತರ ಮೊದಲಾದುವು ಮರೆಮಾಡಲು ಸಾಧ್ಯವಾಗದವುಗಳಾಗಿವೆ. ಆದುದರಿಂದ ಅದು ಪ್ರಕಟವಾಗುವುದನ್ನು ಶರೀಅತ್ ತಡೆಯುವುದಿಲ್ಲ. ಅಥವಾ

ರೋಗದ ಕಾರಣದಿಂದ ಶರೀರದ ಭಾಗ ಚಿಕಿತ್ಸೆಗೋಸ್ಕರ ಡಾಕ್ಟರ್‌ಗೆ ತೋರಿಸಬೇಕಾಗಿ ಬಂದರೆ ತೋರಿಸಬಹುದಾಗಿದೆ. ಆದುದರಿಂದ ಇಸ್ಲಾಮ್ ಸ್ವಾತಂತ್ರ್ಯವನ್ನೂ ನೀಡಿದೆ ಅದರೊಂದಿಗೆ ಹದ್ದುಬಸ್ತುಗಳನ್ನು ಸಹ ನಿಶ್ಚಯಿಸಿದೆ. ಕೆಲವು ನಿರ್ಬಂಧಿತ ಪರಿಸ್ಥಿತಿಗಳಲ್ಲಿ ಪರದೆಯನ್ನು ಕಡಿಮೆಗೊಳಿಸುವ ಅನುಮತಿ ನೀಡಲಾಗಿದೆ. ಆದರೆ ನಿಷ್ಕಾರಣವಾಗಿ ಇಸ್ಲಾಮೀ ಆಜ್ಞೆಗಳನ್ನು ತ್ಯಜಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಸ್ವಾತಂತ್ರ್ಯದ ಹೆಸರಲ್ಲಿ ಲಜ್ಜೆಗೇಡಿತನವನ್ನು ಇಸ್ಲಾಮ್ ಅನುಮತಿಸುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಧರ್ಮದ ಬಗ್ಗೆ ಇದ್ದ ಸೂಕ್ಷ್ಮ ಜ್ಞಾನದ ಕುರಿತು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಸ್ಲಾಮೀ ತತ್ವಗಳ ಅಸ್ತಿಭಾರ ಸೂಕ್ಷ್ಮಜ್ಞಾನದ ಮೇಲಿದೆ. ಅವುಗಳನ್ನು ಅರ್ಥ ಮಾಡಿಕೊಳ್ಳದವರು ತಪ್ಪು ಗ್ರಹಿಕೆಯಿಂದ ಕೆಲವು ಸಾರಿ ದಾರಿ ತಪ್ಪಿ ಹೋಗುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಹೀಗೆ ಹೇಳಿದರು: ಒಬ್ಬನು ತಖ್ವದಿಂದ ವರ್ತಿಸುವವನಾದರೆ ನೂರು ವಿವಾಹ ಸಹ ಆಗಬಹುದು. ಇದರ ಬಗ್ಗೆ ಒಮ್ಮೆ ಚರ್ಚೆ ಮಾಡಲಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: ನಾಲ್ಕು ವಿವಾಹದ ಬಗ್ಗೆ ನಿರ್ಬಂಧ ಶರೀಅತಿನಿಂದ ಸಾಬೀತಾಗುವುದಿಲ್ಲ. ಅಬೂದಾಊದ್‌ನಲ್ಲಿ ಉಲ್ಲೇಖಿತವಾದ ಒಂದು ಹದೀಸಿನ ವರದಿಯಲ್ಲಿ ಹಝ್ರತ್ ಇಮಾಮ್ ಹಸನ್ ಹದಿನೆಂಟು ಅಥವಾ ಹತ್ತೊಂಭತ್ತು ವಿವಾಹದ ಬಗ್ಗೆ ಪ್ರಸ್ತಾಪಿಸಲಾಗಿದೆ. ಮೌಲವಿ ನೂರುದ್ದೀನ್ ಸಾಹೇಬರು ಈ ಹದೀಸನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತೋರಿಸಲು ಕಳುಹಿಸಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮೌಲವಿ ಸಾಹೇಬರೊಂದಿಗೆ ಕೇಳಿರಿ, ಈ ಎಲ್ಲ ಪತ್ನಿಯರು ಏಕ ಕಾಲದಲ್ಲಿ ಇದ್ದರೆಂದು ಎಲ್ಲಿ ಬರೆದಿದೆ. ಹೀಗೆ ನಾಲ್ಕಕ್ಕಿಂತ ಹೆಚ್ಚು ವಿವಾಹದ ಪ್ರಶ್ನೆ ಮುಗಿಯಿತು. ಶರೀಅತ್ ಪ್ರಕಾರ ನಾಲ್ಕಕ್ಕಿಂತ ಹೆಚ್ಚು ವಿವಾಹ ಸಾಧ್ಯವಿಲ್ಲ. ಅವು ಸಹ ಶರತ್ತಿಗೆ ಒಳಗಾಗಿವೆ. ತಖ್ವ ಅದರ ಮುಖ್ಯ ಶರತ್ತಾಗಿದೆ.

ಇಮಾಮರ ಕರೆಗೆ ಓಗೊಡುವ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಮಾಮರ ಕರೆಯೆದುರಿಗೆ ವ್ಯಕ್ತಿಯ ಕರೆಗೆ ಪ್ರಾಮುಖ್ಯತೆ ಇಲ್ಲ. ಅಲ್ಲಾಹನ ಸಂದೇಶವಾಹಕನ ಧ್ವನಿ ಕೇಳಿಸಿದ ಕೂಡಲೆ ಅದಕ್ಕೆ ಉತ್ತರ ನೀಡುವುದು ನಿಮಗೆ ಕಡ್ಡಾಯವಾಗಿದೆ ಅವರ ಆಜ್ಞೆ ಈಡೇರಿಸಲು ಓಡಬೇಕು. ಇದರಲ್ಲಿಯೇ ನಿಮ್ಮ ಅಭಿವೃದ್ಧಿಯ ರಹಸ್ಯ ಅಡಕವಾಗಿದೆ. ಒಬ್ಬನು ಆಗ ನಮಾಝ್ ಮಾಡುತ್ತಾ ಇದ್ದರೂ ಸರಿಯೆ, ಕೂಡಲೆ ನಮಾಝನ್ನು ಬಿಟ್ಟು ಸಂದೇಶವಾಹಕರ ಕರೆಗೆ ಉತ್ತರ ನೀಡಬೇಕು.

ಈ ವಿಷಯದ ಬಗ್ಗೆ ಕೆಲವರು ಆಕ್ಷೇಪ ಮಾಡಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನಿನ ಈ ವಚನ ಓದಿದರು: **ಲಾ ತಜ್‌ಅಲೂ ದುಆಅರ್ರಸೂಲಿ ಬೈನಕುಮ್ ಕದುಆಇ ಬಅ್‌ಝಿಕುಮ್ ಬಅ್‌ಝುನ್ ಖದ್ ಯಅ್‌ಲಮುಲ್ಲಾಹುಲ್ಲಝೀನ ಯತಸಲ್ಲಲೂನ ಮಿನ್‌ಕುಮ್ ಲಿವಾಝ. ಫಲ್ ಯಹ್‌ಝರಿಲ್ಲಝೀನ ಯುಖಾಲಿಫೂನ ಅನ್ ಅಮ್‌ರಿಹೀ. ಅನ್‌ತುಸೀಬಹುಮ್ ಫಿತ್‌ನತುನ್ ವ ಯಸೀಬಹುಂ ಅದಾಬುನ್ ಅಲೀಂ.** (ನಿಮ್ಮ ಮಧ್ಯೆ ನಿಮ್ಮನ್ನು ಸಂದೇಶವಾಹಕರು ಕರೆಯುವುದನ್ನು ನೀವು ಒಬ್ಬರಿನ್ನೊಬ್ಬರನ್ನು ಕರೆಯುವ ಹಾಗೆ ಮಾಡಬೇಡಿರಿ. ನಿಮ್ಮ ಪೈಕಿ ದೃಷ್ಟಿ ತಪ್ಪಿಸಿ ಅಡಗಿ ಹೊರಟು ಹೋಗುವವರನ್ನು ಅಲ್ಲಾಹನು ಬಲ್ಲನು. ಅವನ ಆಜ್ಞೆಯನ್ನು ವಿರೋಧಿಸುವವರು ಅವರಿಗೆ ಯಾವುದಾದರೂ ವಿಪತ್ತು ಬಂದೆರಗುವ ಬಗ್ಗೆ ಅಥವಾ ವೇದನೆ ಭರಿತವಾದ ಶಿಕ್ಷೆ ಬಂದೆರಗುವುದರ ಬಗ್ಗೆ ಹೆದರಲಿ.)

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: **ಯಾ ಅಯ್ಯುಹಲ್ಲಝೀನ ಆಮನುಸ್ತಜೀಬೂ ಲಿಲ್ಲಾಹಿ ವ ಲಿರ್ರಸೂಲಿ ಇಝಾ ದಆಕುಮ್ ಲಿಮಾ ಯುಹ್‌ಯೀಕುಮ್.** ಓ ಸತ್ಯವಿಶ್ವಾಸಿಗಳೇ, ನಿಮ್ಮನ್ನು ಜೀವಂತಗೊಳಿಸಲು ಅಲ್ಲಾಹನು ಮತ್ತು ಅವನ ಸಂದೇಶವಾಹಕನು ನಿಮ್ಮನ್ನು ಕರೆಯುವಾಗ ಅವರ ಮಾತನ್ನು ಆಲಿಸಲು ಕೂಡಲೆ ಬನ್ನಿರಿ.

ಒಟ್ಟಿನಲ್ಲಿ, ಪ್ರವಾದಿಯ ಕರೆಗೆ ಕೂಡಲೆ ಓಗೊಡುವುದು (ಲಬ್ಬೈಕ್ ಎಂದು ಹೇಳುವುದು) ಆವಶ್ಯಕವಾಗಿದೆ. ಇದು ಸತ್ಯವಿಶ್ವಾಸದ ಚಿಹ್ನೆಗಳಲ್ಲಿ ಬಹಳ ದೊಡ್ಡದಾದೊಂದು ಚಿಹ್ನೆ ಅದಾಗಿದೆ. ಪ್ರತಿಯೊಂದು ಕೆಲಸ ಅಲ್ಲಾಹನ ಸಂಪ್ರೀತಿ ಗಳಿಸಲು ಮತ್ತು ಅವನ ಆಜ್ಞೆಗಳನ್ನು ಪಾಲಿಸುತ್ತಾ ಮಾಡಿರಿ. ಜನರನ್ನು ಸಂತೋಷಪಡಿಸಲು ಕೆಲಸ ಮಾಡಬಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಬ್ಬರು ಕೇಳಿದರು: ನಮ್ಮ ಜಮಾಅತಿನ ಬಹಳಷ್ಟು ಜನರು ಗಡ್ಡ ಬೋಳಿಸುತ್ತಾರೆ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮುಖ್ಯ ವಿಷಯ ಅಲ್ಲಾಹನ ಬಗ್ಗೆ ಪ್ರೀತಿಯಾಗಿದೆ. ಈ ಜನರ ಹೃದಯಗಳಲ್ಲಿ ಅಲ್ಲಾಹನ ಬಗ್ಗೆ ಪ್ರೀತಿ ಉಂಟಾದರೆ ಅವರು ತಾನಾಗಿಯೇ ನಮ್ಮನ್ನು ಅನುಕರಿಸಲು ಪ್ರಾರಂಭಿಸುವರು.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಮನವರಿಕೆ ಮಾಡುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನ ಬಗ್ಗೆ ವಾಸ್ತವಿಕ ಪ್ರೀತಿ ನಮ್ಮಲ್ಲಿ ಉಂಟಾಗಲಿ. ನಮ್ಮ ಪ್ರತಿಯೊಂದು ಕೆಲಸ ಅಲ್ಲಾಹನ ಆಜ್ಞೆಗಳ ಪ್ರಕಾರವಾಗಿರಲಿ – ಆಮೀನ್.

(ಖುತ್‌ಬದ ಕೊನೆಗೆ ಸಿರಿಯಾದ ಮುಕರ್ರಮ ಅಬ್ದುನ್ನೂರ್ ಜಾಬೀ ಸಾಹೇಬರ ಶಹಾದತ್ ಬಗ್ಗೆ ಹುಝೂರ್ ವಿವರಿಸಿದರು. ಅವರ ಸದ್ಗುಣಗಳ ಬಗ್ಗೆ ವಿವರಿಸಿ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಪ್ರಕಟಿಸಿದರು.)

————————*****————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 18-03-2016.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon